# ದಿನಾಂಕ:29-06-2010 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ:2 (27)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಜೆ.ಎನ್.ಎನ್.ಯು.ಆರ್.ಎಂ (Jnnurm) ಮಾರ್ಗಸೂಚಿಯಂತೆ ಬೆಂಗಳೂರು ನಗರ ಅಭಿವೃದ್ಧಿ ಯೋಜನೆ – 2006 ಅನ್ನು ಸಿದ್ಧಪಡಿಸಿ ಅನುಮೋದಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಯಿತು. ಈ ಯೋಜನೆಯು 6 ವರ್ಷಗಳ ಕಾಲ ನೀತಿಯನ್ನು ಹಾಗೂ ಹೂಡಿಕೆಯನ್ನು ಒಳಗೊಂಡಿದ್ದು (2007–12), ಬೆಂಗಳೂರು ನಗರದ ಬೆಳವಣಿಗೆಗೆ ಹಾಗೂ ಪ್ರಜೆಗಳ ಮೌಲ್ಯಗಳನ್ನು ತೃಪ್ತಿಪಡಿಸುವ ಗುರಿಯನ್ನು ಒಳಗೊಂಡಿದೆ. ಈ ಯೋಜನೆಯಲ್ಲಿ ಕಾರ್ಯನೀತಿಯ ಆಯ್ಕೆಯನ್ನು ಹೊಂದಿದ್ದು, ಸನ್ನಿವೇಶಗಳಿಗೆ ಮಾರ್ಪಾಡುಗೊಳ್ಳುವ ಅವಶ್ಯಕತೆಗಳನ್ನು ಬಿಂಬಿಸುತ್ತದೆ. ಇದರ ಮೂಲಕ ನಗರದ ನಾಗರೀಕರು ಮೂಲ ಧ್ಯೇಯೋದ್ದೇಶಗಳನ್ನು ಕಂಡುಕೊಳ್ಳಬಹುದಾಗಿದ್ದು, ಭವಿಷ್ಯದಲ್ಲಿ ನಗರವು ಎದುರಿಸಬಹುದಾದ ಸಮಸ್ಯೆಗಳನ್ನು ಗುರುತಿಸಬಹುದಾಗಿದೆ. ಇದರ ಮೂಲಕ ಭವಿಷ್ಯದ ದಿಕ್ಕುಗಳನ್ನು ಸ್ಪಷ್ಟವಾಗಿ ನಿರೂಪಿಸುವುದರಿಂದ ಕಾರ್ಯಕ್ರಮಗಳನ್ನು ಆದ್ಯತೆಯ ಮೇಲೆ ಹಾಗೂ ಪರಸ್ಪರ ಸಮಾಲೋಚನೆಯ ಮೂಲಕ ಹೂಡಿಕೆಯ ತೀರ್ಮಾನಗಳನ್ನು ತೆಗೆದುಕೊಳ್ಳಬಹುದಾಗಿದೆ.

ಭಾರತ ಸಕಾರವು ವರ್ಗ–ಎ (Category_A) ನಲ್ಲಿ ಬೆಂಗಳೂರು ನಗರವನ್ನು ಸಹ ಜೆ.ಎನ್.ಎನ್.ಯು.ಆರ್.ಎಂ ಅಡಿಯಲ್ಲಿ ಗುರುತಿಸಿದೆ. ಇತ್ತೀಚಿನ ದಿನಗಳಲ್ಲಿ ಬೆಂಗಳೂರು ನಗರವು ಮಾಹಿತಿ ತಂತ್ರಜ್ಞಾನದಲ್ಲಿ ಮುಖ್ಯ ನೆಲೆಯಾಗಿದ್ದು, ಹೆಚ್ಚಿನ ಕೈಗಾರಿಕೆಗಳು ನೆಲೆಕಂಡುಕೊಂಡಿವೆ. ಇದರಿಂದಾಗಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಜನರು ವಲಸೆ ಬಂದಿದ್ದಾರೆ. ಈಗಾಗಲೇ ಬೆಂಗಳೂರು ನಗರದಲ್ಲಿ ಮೇಲು ಸೇತುವೆ ಮೆಟ್ರೋ ರೈಲು, ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ, ಬೃಹತ್ ನೀರುಗಾಲುವೆ, ಕುಡಿಯುವ ನೀರು, ಘನ ತ್ಯಾಜ್ಯ ನಿರ್ವಹಣೆ ಇವುಗಳನ್ನು ಹಮ್ಮಿಕೊಳ್ಳಲಾಗಿದೆ. ಆದರೆ, ಇವುಗಳನ್ನು ಉನ್ನತೀಕರಣಗೊಳಿಸಲು ಸಾಕಷ್ಟು ಅವಕಾಶಗಳು ಇರುತ್ತವೆ.

ಈ ನಗರ ಅಭಿವೃದ್ಧಿ ಯೋಜನೆಯ ಮೂಲಕ ನಗರವು ಎದುರಿಸಬಹುದಾದ ಸಮಸ್ಯೆಗಳನ್ನು ವ್ಯವಸ್ಥಿತವಾಗಿ ಅಧ್ಯಯನ ಮಾಡಿ ನಾಗರೀಕರ ಪಾಲ್ಗೊಳ್ಳುವಿಕೆಯಿಂದ ನಿರ್ಧರಿಸಬಹುದಾಗಿದೆ. ನರ್ಮ್ ಅಡಿಯಲ್ಲಿ ನಗರ ಅಭಿವೃದ್ಧಿ ಯೋಜನೆಯೂ ಈ ಕೆಳಗಿನ ಉದ್ದೇಶಗಳನ್ನು ಒಳಗೊಂಡಿದೆ.

- ನಗರದ ನಿರ್ದೇಶಿತ ಬೆಳವಣಿಗೆ.
- ನಾಗರಿಕರ ಪಾಲ್ಗೊಳ್ಳುವಿಕೆ.
- ಪ್ರಶಾಸನ ಸುಧಾರಣೆಯ ಮೂಲಕ ಉತ್ತಮ ಸಮಾಜದ ನಿರ್ವಹಣೆ.
- ವಸ್ತುನಿಷ್ಠವಾದ ಹಣಕಾಸಿನ ಹೂಡಿಕೆ ಮತ್ತು ಮುಂದುವರಿಕೆ.

ದಿನಾಂಕ : 02–11–2006 ರಂದು 7 ನಗರ ಸಭೆ (CMC) 1 ಪಟ್ಟಣ ಪಂಚಾಯಿ (TMC) ಮತ್ತು 110 ಗ್ರಾಮಗಳನ್ನು ಒಳಗೊಂಡು ಮಹಾನಗರ ಪಾಲಿಕೆಯು ಬೃಹತ್ ಬೆಂಗಳೂ ಮಹಾನಗರ ಪಾಲಿಕೆಯಾಗಿ ರಚನೆಯಾಗಿರುತ್ತದೆ. ಆದ್ದರಿಂದ ಈ ಹಿಂದೆ ಸಲ್ಲಿಸಿದ ಕೇಂದ್ರ ಯೋಜ ಬೆಂಗಳೂರು:2006 ನ್ನು ಪರಿಷ್ಕರಣೆ ಮಾಡಬೇಕಾಗಿರುತ್ತದೆ.

ಮೆ: ಐಡೆಕ್ ರವರಿಗೆ ಯೋಜನೆಯನ್ನು ಮರುಪರಿಷ್ಕರಿಸುವ ಕಾರ್ಯವನ್ನು ವಹಿಸಲಾಗಿತ್ತು. ಸಂಭಂದ ಜೂನ್ ಮತ್ತು ಜುಲೈ ತಿಂಗಳಿನಲ್ಲಿ ಸಭೆಗಳು ನಡೆದಿರುತ್ತದೆ. ಆ ನಂತರ ಹಲವಾ ಸಭೆಗಳು ನಡೆದಿದ್ದು, ದಿನಾಂಕ : 11–03–2010 ರಂದು ಮಾನ್ಯ ಆಡಳಿತಗಾರರ ಸಮ್ಮುಖ (Power Point Presentation ಮೂಲಕ) ವಿವರಿಸಲಾಯಿತು.

ಮಾನ್ಯ ಆಡಳಿತಗಾರರು ಪರಿಷ್ಕರಿಸಿದ ಯೋಜನೆ – 2009 ರಲ್ಲಿ ಈ ಕೆಳಕಂಡ ಅಂಶಗಳ ಅಳವಡಿಸಲು ಸೂಚಿಸಿರುತ್ತಾರೆ.

1. ಪ್ರಸ್ತುತ ನೀರಿನ ಪರಿಣಾಮ (LPCD) ಯನ್ನು ಬೆಂಗಳೂರು ನೀರು ಸರಬರಾಜು ಮ ಒಳಚರಂಡಿ ಮಂಡಳಿ (BWSSB) ರವರಿಂದ ಖಚಿತಪಡಿಸಿಕೊಳ್ಳುವುದು.
2. ಘನ ತ್ಯಾಜ್ಯ ವಿಲೇವಾರಿಗೆ ಹಂಚಿಕೆಯಾಗಿರುವ ರೂ.800 ಕೋಟಿಗಳನ್ನು ಸಮರ್ಥಿಸಿಕೊಳ್ಳುವುದ ಭೂಮಿಯ ದರವನ್ನು ಯೋಜನಾ ವೆಚ್ಚಕ್ಕೆ ಸೇರಿಸುವುದು ಹಾಗೂ ಅದನ್ನು ಬಿಬಿಎಂಪಿಯ ಪಾ ಎಂದು ತೋರಿಸುವುದು. ಮೊದಲ ಹಾಗೂ ದ್ವಿತೀಯ ಘನ ತ್ಯಾಜ್ಯ ನಿರ್ವಹಣೆಗಳನ್ನು ಯೋಜ ಮೊತ್ತಕ್ಕೆ ಸೇರಿಸುವುದು.
3. ಬೃಹತ್ ಯೋಜನೆಗಳನ್ನು ನಿರ್ವಹಿಸಲು ಬೇಕಾದ ಆಡಳಿತಾತ್ಮಕ ಸುಧಾರಣೆ, ಸಾಮರ್ಥ್ಯ ಅಭಿವೃದ್ಧಿಯ ಬಗ್ಗೆ ಸಲಹೆಗಳನ್ನು ನೀಡುವುದು ಮತ್ತು ಯೋಜನಾ ನಿರ್ವಹಣಾ ಘಟಕವ ಸ್ಥಾಪಿಸುವುದು.
4. ಕೊಳಚೆ ನೀರು, ಬೃಹತ್ ನೀರುಗಾಲುವೆಯನ್ನು ಸೇರದಿರುವ ಹಾಗೆ ಕೈಗೊಳ್ಳಬೇಕಾದ ಕ್ರಮಗಳ ಸೂಚಿಸುವುದು.
5. ನಗರ ನವೀಕರಣ ಅಂಶಗಳನ್ನು ಸ್ಪಷ್ಟಪಡಿಸುವುದು.
6. ಬಿಆರ್‌ಟಿ (BRT) ಪದ್ಧತಿಯ ಬಗ್ಗೆ ಸ್ಪಷ್ಟೀಕರಣ ನೀಡುವುದು.

ಈ ಎಲ್ಲಾ ಅಂಶಗಳನ್ನು ಒಳಗೊಂಡ ಪರಿಷ್ಕರಿಸಿದ ಯೋಜನೆ – 2009 ಅನ್ನು ದಿನಾಂಕ : 25–03–2010 ರಂದು ಮೆ : ಐಡೆಕ್ ಸಂಸ್ಥೆರವರು ಸಲ್ಲಿಸಿರುತ್ತಾರೆ. ಇದರ ಪ್ರಕಾರ ಜೆ.ಎನ್.ಎನ್.ಯು.ಆರ್.ಎಂ (Jnnurm) 2007–2012 ಅವಧಿಯ ಮೂಲ ಬಂಡವಾಳ ಹೂಡಿಕೆಯು ರೂ.69,790 ಕೋಟಿಗಳಿಂದ ರೂ.71,723 ಕೋಟಿಗಳಿಗೆ ಹೆಚ್ಚಾಗಿರುತ್ತದೆ.

ಈ ಸಂಬಂಧ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ (KUIDFC) ಇವರು ದಿನಾಂಕ:12–04–2010 ರ ತಮ್ಮ ಪತ್ರದಲ್ಲಿ ಪರಿಷ್ಕರಿಸಿದ ಯೋಜನೆ–2009 ಅನ್ನು ಅನುಮೋದಿಸಿ ಸಭೆ (State level Empowered Committee-SLEC) ಮುಂದೆ ಮಂಡಿಸಲು ಕೋರಿರುತ್ತಾರೆ ಹಾಗು ಜೆ.ಎನ್.ಎನ್.ಯು.ಆರ್.ಎಂ (Jnnurm) ಮಾರ್ಗಸೂಚಿಯಂತೆ ಕೇಂದ್ರ ನಗರಾಭಿವೃದ್ಧಿ ಇಲಾಖೆ (MOUD) ಗೆ ರವಾನಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಕೋರಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಪರಿಷ್ಕೃತ ಬೆಂಗಳೂರು ಯೋಜನೆ–2009 ಕ್ಕೆ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:06–05–2010 ರ ಟಿಪ್ಪಣಿ.

ಆಡಳಿತ ಪಕ್ಷದ ನಾಯಕರಾದ ಶ್ರೀ ಬಿ.ಎಸ್.ಸತ್ಯನಾರಾಯಣ ರವರು ಈ ವಿಷಯವನ್ನು ಮುಂದೂಡಲು ಸೂಚಿಸಿದರು.

ಶ್ರೀ ವೆಂಕಟೇಶಮೂರ್ತಿ ರವರು ಶ್ರೀ ಬಿ.ಎಸ್.ಸತ್ಯನಾರಾಯಣ ರವರ ಸೂಚನೆಯನ್ನು ಅನುಮೋದಿಸಿದರು.

ಮಹಾಪೌರರ ಸಭೆಯ ಸೂಚನೆಯನ್ನು ಮತಕ್ಕೆ ಹಾಕಲಾಗಿ ಸೂಚನೆಯು ಸರ್ವಾನುಮತದಿಂದ ಅಂಗೀಕೃತವಾಯಿತು.

"ಮುಂದೂಡಿದೆ"

(ಎಸ್.ಕೆ.ನಟರಾಜ)

ಮಹಾಪೌರರು